20	Kolar	3	314.01	1105
21	Koppal	8	1031.57	1819
22	Mandya	5	478.29	959
23	Mysore	12	3108.38	13732
24	Raichur	7	12038.15	4926
25	Ramanagara	31	1570.89	13502
26	Shimoga	8	965.24	12935
27	Tumkur	9	2356.55	34276
28	Uttara Kannada	4	8296.00	1780
29	Udupi	2	325.54	235
30	Suitable location	3	10096.97	1530
31	Many Districts	7	14779.61	53150
	Total	**389**	**392640.37**	**710792**

ಟೌನ್‌ಶಿಪ್ ನಿರ್ಮಾಣ

248 (433) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :– ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು ಮತ್ತು ಯಾವುವು (ವಿವರಗಳನ್ನು ನೀಡುವುದು);

ಆ) ಕೊಪ್ಪಳ ಜಿಲ್ಲಾ ಕೇಂದ್ರಗಳಲ್ಲಿ ಕೈಗಾರಿಕೆಗಳ ಸಂಖ್ಯೆ ಹೆಚ್ಚಿಗೆ ಇರುವುದರಿಂದ, ಟೌನ್‌ಶಿಪ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಎಂದಿನಿಂದ ಟೌನ್‌ಶಿಪ್ ನಿರ್ಮಿಸಲಾಗುವುದು;

ಈ) ಕೊಪ್ಪಳದಲ್ಲಿರುವ ಕೈಗಾರಿಕೆಗಳು ಹೊರಸೂಸುವ ತ್ಯಾಜ್ಯ ವಸ್ತುಗಳಿಂದ ಪರಿಸರ ಮಾಲಿನ್ಯಗೊಂಡು ಅಂತರ್ಜಲದ ಮಟ್ಟ ಕಲುಷಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಸದರಿ ಕೈಗಾರಿಕೆಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಊ) ಈ ರೀತಿ ಪರಿಸರ ಮತ್ತು ಅಂತರ್ಜಲ ಕಲುಷಿತವಾಗುತ್ತಿರುವುದರಿಂದ ಅಲ್ಲಿ ವಾಸಿಸುತ್ತಿರುವ ಜನಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಬಂದಿದ್ದಲ್ಲಿ, ಇದರ ನಿವಾರಣೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ) ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ 179 ಅತಿ ಸಣ್ಣ ಮತ್ತು 13 ಸಣ್ಣ ಕೈಗಾರಿಕೆಗಳು ಸ್ಥಾಪನೆಗೊಂಡಿರುತ್ತವೆ. ಸಣ್ಣ ಕೈಗಾರಿಕೆಗಳ ಪಟ್ಟಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಇಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಕೈಗಾರಿಕೆಗಳಿಂದ ವಾಯು ಮಾಲಿನ್ಯವಾಗುತ್ತಿರುವ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿಗೆ ಕೆಲವು ದೂರುಗಳು ಬಂದಿರುತ್ತವೆ.

ಉ) ಮತ್ತು (ಊ) ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಸಮಸ್ಯೆಯನ್ನು ನಿವಾರಿಸಲು ಈ ಕೆಳಗಿನಂತೆ ಕ್ರಮ ಕೈಗೊಳ್ಳುತ್ತಿದೆ.

ಋ) 1. ಈ ಉದ್ದಿಮೆಗಳು ಸ್ಥಾಪನೆ ಮಾಡುವ ಮುಂಚಿತವಾಗಿ ಮಂಡಳಿಯಿಂದ ಸ್ಥಾಪನಾನುಮತಿ ಪಡೆಯಬೇಕು. ಈ ಅನುಮತಿಯಲ್ಲಿ ಹಲವಾರು ನಿಬಂಧನೆಗಳನ್ನು ಪರಿಪಾಲಿಸಲು ಆದೇಶಿಸಲಾಗಿರುತ್ತದೆ.

2. ಹಾಲಿ ಕಾರ್ಯಾಚರಣೆಯಲ್ಲಿರುವ ಉದ್ದಿಮೆಗಳು ಮಂಡಳಿಯು ನಿಗದಿಪಡಿಸಿದ ತಾಂತ್ರಿಕ ಉಪಕರಣಗಳನ್ನು ಅಳವಡಿಸಿರುತ್ತದೆ. ಆದಾಗ್ಯೂ, ಕೆಲವೊಮ್ಮೆ ತಾಂತ್ರಿಕ ದೋಷಗಳಿಂದಾಗಿ ಉಪಕರಣಗಳ ಕಾರ್ಯಾಚರಣೆಯಲ್ಲಿ ತೊಡಕುಂಟಾದಾಗ ವಾಯು ಮಾಲಿನ್ಯವಾಗುತ್ತದೆ. ಇಂತಹ ದೋಷಪೂರಿತ ಉದ್ದಿಮೆಗಳಿಗೆ ಮಂಡಳಿಯು ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿ ತದನಂತರ ಮಂಡಳಿಯ ಕೇಂದ್ರ ಕಛೇರಿಯಲ್ಲಿ ಉದ್ದಿಮೆದಾರರೊಂದಿಗೆ ಮೌಖಿಕ ವಿಚಾರಣೆ ಸಭೆ ನಡೆಸಿ, ತಾಂತ್ರಿಕ ತೊಂದರೆಗಳನ್ನು ನಿಗದಿತ ಅವಧಿಯಲ್ಲಿ ನಿವಾರಿಸಲು ಆದೇಶ ನೀಡುತ್ತದೆ. (ಪ್ರತಿಯನ್ನು ಲಗತ್ತಿಸಿದೆ).

ಅನುಬಂಧ–1

ಕಾರ್ಯ ನಿರ್ವಹಿಸುತ್ತಿರುವ ಘಟಕಗಳ ಯಾದಿ

ಕ್ರಮ ಸಂಖ್ಯೆ	ಘಟಕದ ಹೆಸರು ಮತ್ತು ವಿಳಾಸ
1	ಮೆ॥ ಎಸ್.ಪಿ. ಎಂಟರ್‌ಪ್ರೈಸಸ್ ಭಾಗ್ಯನಗರ ಕೊಪ್ಪಳ
2	ಮೆ॥ ಶಾರದಾ ಸಿಮೆಂಟ್ ಕಾಂಕ್ರಿಟ್ ವರ್ಕ್ಸ್ ಗದಗ ರೋಡ್ ಕೊಪ್ಪಳ
3	ಮೆ॥ ಮಖಿದುಮಿಯಾ ಆಪಸೆಟ್ ಹಸನ ರೋಡ್ ಕೊಪ್ಪಳ
4	ಮೆ॥ ಅಕ್ಷಯ ಪ್ಲಾಸ್ಟಿಕ್ ಪೈಪ್ಸ್ ಇಂಡಸ್ಟ್ರೀಜ್ ಕೊಪ್ಪಳ
5	ಮೆ॥ ವೀರೇಶ್ವರ ಇಂಡಸ್ಟ್ರೀಜ್ ಗಂಜಿ ರೋಡ್ ಕೊಪ್ಪಳ
6	ಮೆ॥ ಶಾರದಾ ಸಿಮೆಂಟ್ ಕಾಂಕ್ರೀಟ್ ವರ್ಕ್ಸ್ ಗದಗ ರೋಡ್ ಕೊಪ್ಪಳ
7	ಮೆ॥ ರಾಮದೇವ್ ಪ್ರೈಡ್ ಗ್ರಾಮ ಇಂಡಸ್ಟ್ರೀಸ್ ಗಂಜಿ ರೋಡ್ ಕೊಪ್ಪಳ
8	ಮೆ॥ ರೋಹಿತ ಆಫಸೆಟ್ ಪ್ರಿಂಟರ್ಸ್ ಕೊಪ್ಪಳ
9	ಮೆ॥ ಸುದರ್ಶನ ರೈಸ್ ಇಂಡಸ್ಟ್ರೀಜ್ ಹಾಸನ ರೋಡ್ ಕೊಪ್ಪಳ
10	ಮೆ॥ ಕರ್ನಾಟಕ ಟೈರ ರಿಟ್ರೇಡರ್ಸ್ ಹೊಸಪೇಟ ರೋಡ್ ಕೊಪ್ಪಳ
11	ಮೆ॥ ಪ್ರೇಮ್ ಇಂಜಿನೀಯರಿಂಗ್ ವರ್ಕ್ಸ್ ಗದಗ ರೋಡ್ ಕೊಪ್ಪಳ
12	ಮೆ॥ ಮೋಹಿತ ಇಂಡಸ್ಟ್ರೀಜ್ ಕಿನ್ನಾಳ ರೋಡ್ ಕೊಪ್ಪಳ
13	ಮೆ॥ ಅಕ್ಕಮಹಾದೇವಿ ಡ್ರೈಯರ್ಸ್ ಗೋಶಾಲ ರೋಡ್ ಕೊಪ್ಪಳ

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ

249 (817) ಶ್ರೀ ಖಾದರ್ ಯು.ಟಿ. (ಮಂಗಳೂರು):– ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಕಳೆದ 2 ವರ್ಷಗಳಿಂದ ಬಿಡುಗಡೆ ಮಾಡಲಾದ ಹಣವೆಷ್ಟು? (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ಈ ಪೈಕಿ ಇದುವರೆಗೂ ವೆಚ್ಚವಾಗಿರುವ ಹಣವೆಷ್ಟು?

ಇ) ಉಳಿಕೆ ಹಣವನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು?

ಈ) ಪ್ರಸಕ್ತ ವರ್ಷ ಎಷ್ಟು ಹಣವನ್ನು ಆಯವ್ಯಯದಲ್ಲಿ ಮೀಸಲಿರಿಸಲಾಗಿದೆ? ಇಲ್ಲಿಯವರೆಗೂ ಬಿಡುಗಡೆ ಮಾಡಲಾದ ಹಣ ಎಷ್ಟು? ಕ್ಷೇತ್ರವಾರು ವಿವರ ನೀಡುವುದು?